**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 23.07.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃಪ್ರತಿವಾದಿಯ ಪರವಾಗಿ ಶ್ರೀ.ಎಂ.ಬಿ.ಹೆಚ್.ವಕೀಲರಿಂದ.**

ಆಸ್ತಿಯಲ್ಲಿ ಪಾಲುವಿಭಾಗ ಕೋರಿ ನಾನು ಈ ದಾವೆಯನ್ನು ದಾಖಲು ಮಾಡಿರುವೇನು. ನಾನು ಈ ದಾವೆ ನನ್ನ ತಂದೆ, ನನ್ನ ಚಿಕ್ಕಪ್ಪ ಮತ್ತು ಅತ್ತೆಯಂದಿರ ವಿರುದ್ಧ ದಾಖಲು ಮಾಡಿರುವೇನು. ಈ ದಾವೆಯನ್ನು ನಮ್ಮ ಕುಟುಂಬದ ಜಮೀನು ಮತ್ತು ಮನೆಯ ಆಸ್ತಿಗಳಲ್ಲಿ ಪಾಲು ವಿಭಾಗ ಕೋರಿ ದಾವೆಯನ್ನು ದಾಖಲು ಮಾಡಿರುವೇನು. ಆ ದಾವಾಸ್ತಿಗಳ ಸರ್ವೇ ನಂಬರಗಳನ್ನು ನನಗೆ ಹೇಳಲು ಬರುತ್ತದೆ. ಆ ಆಸ್ತಿಗಳ ಸರ್ವೇ ನಂಬರ್ 44/4 ಹಾಗೂ 44/1 ರ ಜಮೀನು ಆಸ್ತಿಗಳಾಗಿರುವವು. ಈ ದಾವಾಜಮೀನುಗಳ ಒಟ್ಟು ವಿಸ್ತೀರ್ಣ 5 ಎಕರೆ 10 ಗುಂಟೆಗಳು ಇರುವವು. ಸರ್ವೇ ನಂಬರ್ 44/1 ರ ಜಮೀನಿನ ವಿಸ್ತೀರ್ಣ 1 ಎಕರೆ 30 ಗುಂಟೆ ಇರುವುದು. ಸರ್ವೇ ನಂಬರ್ 44/4 ರ ಜಮೀನಿನ ವಿಸ್ತೀರ್ಣ 5 ಎಕರೆ ಇರುವುದು. ದಾವಾ ಮನೆಯ ಆಸ್ತಿಯ ನಂಬರ 56 ಇರುವುದು. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳಿಗೆ ನಾನೇ ಮಾಹಿತಿ ನೀಡಿರುವೇನು. ನಾನು ನನ್ನ ಪರವಾಗಿ ಮತ್ತು ಉಳಿದ ವಾದಿಯರ ಪರವಾಗಿ ಸಾಕ್ಷಿ ನುಡಿಯುತ್ತಿರುವೇನು.

ಮುಂದಿನ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ